## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 7/2020

ಫ್ರಾಸಾ-07

ಚಾಸಾ-21

| | | |
|---|---|---|
| ಸಾಕ್ಷಿಯ ಹೆಸರು | - | ನಾಗಪ್ಪ ಬೀರಣ್ಣವರ |
| ತಂದೆ ಹೆಸರು | - | ದ್ಯಾವಪ್ಪ |
| ವಯಸ್ಸು | - | 37 ವರ್ಷ |
| ಉದ್ಯೋಗ | - | ಪಿಸಿ ಕಮರಿಪೇಟ ಪೊಲೀಸಠಾಣೆ ಹುಬ್ಬಳ್ಳಿ |
| ವಾಸಸ್ಥಳ | - | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 13-03-2024 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಹುಬ್ಬಳ್ಳಿ ಉಪನಗರ ಠಾಣೆಯಲ್ಲಿ 2015 ರಿಂದ 2021 ರವರೆಗೆ ಪಿ ಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 2-9-2020 ರಂದು ನಾನು ಠಾಣೆಯಲ್ಲಿದ್ದಾಗ 4 ಘಂಟೆ ಸುಮಾರಿಗೆ ನಮ್ಮ ಪೊಲೀಸ ಇನ್ಸಪೆಕ್ಟರ ರವರು ನನಗೆ ಮತ್ತು ನಮ್ಮ ಸಿಬ್ಬಂದಿಗೆ ಮೋಟಾರ ಸೈಕಲ ದೇಸಾಯಿ ಸರ್ಕಲ ಕಡೆಗೆ ಮೋಟಾರ ಸೈಕಲನಲ್ಲಿ ಗಾಂಜಾ ಮಾರಾಟ ಮಾಡುವ ವ್ಯಕ್ತಿಗಳು ಹೊರಟಿದ್ದಾರೆಂದು ಮಾಹಿತಿ ಬಂದಿದ್ದು ಅದರಂತೆ ದಾಳಿಗೆ ಹೋಗಬೇಕಾಗಿದೆ ಎಂದು ತಿಳಿಸಿದರು. ನಮ್ಮ ಅಧಿಕಾರಿಗಳು ಎಚ್ ಸಿ 1628 ರವರಿಗೆ ಇಬ್ಬರು ಸರ್ಕಾರಿ ಪಂಚರನ್ನು ಕರೆತರಲು ಹೇಳಿ ತಹಶೀಲ್ದಾರ ಕಚೇರಿಗೆ ಕಳುಹಿಸಿದ್ದಾರೆ. ಅದರಂತೆ ಇಬ್ಬರು ಪಂಚರನ್ನು ಸದರಿ ಸಿಬ್ಬಂದಿ ಕರೆದುಕೊಂಡು ಬಂದರು. ನಂತರ ಪತ್ರಾಂಕಿತ ಅಧಿಕಾರಿ ಮತ್ತು ತೂಕ ಮಾಡುವ ವ್ಯಕ್ತಿಯನ್ನು ಕರೆತರುವಂತೆ ಸಿಬ್ಬಂದಿಯವರನ್ನು ಮೂಲಕ ಕಳುಹಿಸಿದರು . ನಂತರ ಪಿ ಐ ರವರು ಪಂಚರಿಗೆ , ಪತ್ರಾಂಕಿತ ಅಧಿಕಾರಿಗೆ ನೋಟೀಸು ಅವರಿಂದ ಒಪ್ಪಿಗೆ ಪಡೆದಿರುತ್ತಾರೆ.

3. ನಂತರ ಕೆಎ–25–ಜಿ–409 ಸರ್ಕಾರಿ ಜೀಪನಲ್ಲಿ ಪಂಚರು ಪತ್ರಾಂಕಿತ ಅಧಿಕಾರಿ , ಪಿ ಐ ರವರು ಹಾಗೂ ಕೆಎ–25–ಜಿ–652 ಇನ್ನೊಂದು ವಾಹನದಲ್ಲಿ ತೂಕ ಮಾಡುವ ವ್ಯಕ್ತಿ ಮತ್ತ ಸಿಬ್ಬಂದಿ ಸೇರಿಕೊಂಡು ಹಾಗೂ ಇನ್ನುಳಿದ ಸಿಬ್ಬಂದಿ ಮೊಟಾರ ಸೈಕಲನಲ್ಲಿ ಸಂಜೆ 5 ಘಂಟೆಗೆ ಠಾಣೆಯನ್ನು ಬಿಟ್ಟಿದ್ದೇವೆ. ನಾವೆಲ್ಲರೂ ದೇಸಾಯಿ ಸರ್ಕಲ ಹತ್ತಿರ ನಿಂತು ಗಮನಿಸುತ್ತಿದ್ದು , ಇನ್ನಿಬ್ಬರು ಸಿಬ್ಬಂದಿ ಎಚ್ 1628 ಹಾಗೂ 1563 ರವರು ಐ ಬಿ ಕ್ರಾಸ ಹತ್ತಿರ ನಿಂತು ಗಮನಿಸುತ್ತಿದ್ದರು. ಇಬ್ಬರು ವ್ಯಕ್ತಿಗಳು ಮೋಟಾರ ಸೈಕಲನಲ್ಲಿ ಪಿಂಟೋ ಸರ್ಕಲದಿಂದ ದೇಸಾಯಿ ಸರ್ಕಲ ಕಡೆಗೆ ಬರುತ್ತಿದ್ದರು. ಪೊಲೀಸ ಇನಸಪೆಕ್ಟರ ರವರು ಕೈ ತೋರಿಸಿ ವಾಹನ ನಿಲ್ಲಿಸಲು ಸೂಚನೆ ಕೊಟ್ಟರು ಅದರೆ ಮೋಟಾರ ಸೈಕಲನವರು ತಪ್ಪಿಸಿಕೊಂಡು ತಮ್ಮ ಮೋಟಾರ ಸೈಕಲ ತೆಗೆದುಕೊಂಡು ದೇಸಾಯಿ ಕ್ರಾಸ ದಾಟಿ ಹೋಗಿರುತ್ತಾರೆ. ಆಗ ಅಲ್ಲಿದ್ದ ಸಿಬ್ಬಂದಿ 1628 ಮತ್ತು 1563 ರವರು ಸದರಿ ಮೋಟಾರ ಸೈಕಲನ್ನು ತಡೆಯಲು ಪ್ರಯತ್ನಿಸಿದಾಗ ಮೋಟಾರ ಸೈಕಲ ಸವಾರರು ಅವರನ್ನೂ ಸಹ ತಪ್ಪಿಸಿಕೊಂಡು ಚರ್ಚ ಕಂಪೌಂಡ ಹತ್ತಿರ ಹೋಗಿದ್ದು ಆದರೆ ಮುಂದೆ ದಾರಿ ಇಲ್ಲದ ಕಾರಣ ಮುಂದೆ ಹೋಗಲು ಆಗಲಿಲ್ಲ. ಆಗ ಸಿಬ್ಬಂದಿಯವರು ಸದರಿ ಮೋಟಾರ ಸೈಕಲ ಸವಾರರನ್ನು ಹಿಡಿದರು. ಆಗ ಪಿ ಐ , ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಅಲ್ಲಿಗೆ ಬಂದರು.

4. ನಂತರ ಪಿ ಐ ರವರು ಸದರಿ ಇಬ್ಬರು ವ್ಯಕ್ತಿಗಳಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಮಾತಿಹಿ ಬಂದಿರುತ್ತದೆ. ನಿಮ್ಮ ತಪಾಸಣೆ ಮಾಡಬೇಕಾಗಿ ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೋ ಅಥವಾ ಮ್ಯಾಜಿಸ್ಟ್ರೇಟ ಮುಂದೆ ಮಾಡಬೇಕೋ ಎಂದು ವಿಚಾರಿಸಲಾಗಿ 1 ನೇ ಆರೋಪಿ ಮಾರುತಿ ಪತ್ರಾಂಕಿತ ಅಧಿಕಾರಿಯ ಮುಂದೆ ತಪಾಸಣೆ ಮಾಡಬಹುದು ಎಂದು ಹೇಳಿದನು. ಪಿ ಐ ರವರು ಸದರಿ ವ್ಯಕ್ತಿಗಳ ಹೆಸರು ವಿಚಾರಿಸಲಾಗಿ ಅವರಲ್ಲಿ ಒಬ್ಬ ಮಾರುತಿ ಹರಿಣಶಿಕಾರಿ ಮತ್ತು ಇನ್ನೊಬ್ಬ ಚಂದಪ್ಪ ಹರಿಣಶಿಕಾರಿ ಎಂದು ತಿಳಿಸಿದನು. ಪತ್ರಾಂಕಿತ ಅಧಿಕಾರಿಯು ತನ್ನ ಮತ್ತು ನಮ್ಮ ಹತ್ತಿರ ಯಾವುದೇ ಮಾದಕ ವಸ್ತುಗಳ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡರು.

5. 1 ನೇ ಆರೋಪಿ ಹತ್ತಿರ ಇದ್ದ ಕಪ್ಪುಬಣ್ಣದ ಬ್ಯಾಗನ್ನು ತೆಗೆದು ನೋಡಲಾಗಿ ಸದರಿ ಬ್ಯಾಗನಲ್ಲಿ 2 ಬಂಡಲಗಳು ಇದ್ದು ಅದರಲ್ಲಿ ಘಾಟು ವಾಸನೆ ಬರುವ ಗಾಂಜಾ ಇತ್ತು, ಅದರಲ್ಲಿ ಬೀಜ ಮತ್ತು ಎಲೆಗಳು ಇದ್ದವು. ತೂಕ ಮಾಡುವ ವ್ಯಕ್ತಿಯಿಂದ ಸದರಿ ಗಾಂಜಾವನ್ನು ತೂಕ ಮಾಡಲಾಗಿ ಒಂದು ಬಂಡಲನಲ್ಲಿ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಹಾಗೂ ಇನ್ನೊಂದು 2 ಕೆ ಜಿ 2 0 ಗ್ರಾಂ ತೂಕದ ಗಾಂಜಾ ಇತ್ತು. ಸದರಿ ಪಾಕೇಟನಿಂದ ತಲಾ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆಯಲಾಯಿತು. ಸದರಿ ಮಾದರಿ ಗಾಂಜಾವನ್ನು ಬಟ್ಟೆ ಚೀಲದಲ್ಲಿ ಹಾಕಿ ಪ್ಯಾಕ ಮಾಡಿ ಜೆ ಎಂ ಎಫ-ಎ 2 ಎಂಬ ಬೋಲ್ಟನಿಂದ ಸೀಲು ಮಾಡಲಾಯಿತು. ಸದರಿ ಪ್ಯಾಕನ ಮೇಲೆ ಪಂಚರು , ಪತ್ರಾಂಕಿತ ಅಧಿಕಾರಿ ಹಾಗೂ ಪಿ ಐ ರವರ ಸಹಿ ಇರುವ ಚೀಟಿ ಅಂಟಿಸಲಾಯಿತು. ಉಳಿದ ಗಾಂಜಾವನ್ನು ಬಿಳಿ ಬಟ್ಟೆಯಿಂದ ಪ್ಯಾಕ ಮಾಡಿ ಆರ -1 , ಆರ್ 2 ಎಂದು ಗುರುತಿಸಲಾಯಿತು. ಸ್ಯಾಂಪಲ ಗಾಂಜಾವನ್ನು ಎಸ್ -1 ಮತ್ತು ಎಸ್-2 ಎಂದು ಗುರುತಿಸಲಾಯಿತು. ಸದರಿ ವ್ಯಕ್ತಿಯನ್ನು ತಪಾಸಣೆ ಮಾಡಲಾಗಿ ಆತನಿಂದ 1000 ರೂ ಹಾಗೂ ಕಪ್ಪು ಬಣ್ಣದ ಕಾಲೇಜ ಬ್ಯಾಗ ದೊರೆತಿರುತ್ತವೆ.

6. 2 ನೇ ಆರೋಪಿಯ ತಪಾಸಣೆ ಮಾಡಲಾಗಿ ಅತನ ಬಳಿ ಒಂದು ಹಳದಿ ಚೀಲ ಇದ್ದು ಅದರಲ್ಲಿ ಪ್ಲಾಸ್ಟಿಕ ಪಾಕೇಟ ಇದ್ದು ಅದರಲ್ಲಿ ಎಲೆ ಮತ್ತು ಬೀಜ ಇರುವ ಗಾಂಜಾ ಇತ್ತು. ಅದನ್ನು ತೂಕ ಮಾಡುವ ವ್ಯಕ್ತಿಯಿಂದ ತೂಕ ಮಾಡಿಸಲಾಗಿ ಅದು 1 ಕೆ ಜಿ 49 ಗ್ರಾಂ ತೂಕ ಇತ್ತು. ಅದರಿಂದ 50 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದು ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ಚೀಲದಲ್ಲಿ ಹಾಕಿ ಪ್ಯಾಕ ಮಾಡಿ ಜೆ ಎಂ ಎಫ-ಎ 2 ಎಂಬ ಬೋಲ್ಟನಿಂದ ಸೀಲು ಮಾಡಲಾಯಿತು. ಸ್ಯಾಂಪಲ ಗಾಂಜಾವನ್ನು ಎಸ್-3 ಎಂದು ಉಳಿದ ಗಾಂಜಕ್ಕೆ ಆರ್ -3 ಎಂದು ಗುರುತು ನೀಡಲಾಯಿತು. ಸದರಿ ಪ್ಯಾಕನ ಮೇಲೆ ಪಂಚರು , ಪತ್ರಾಂಕಿತ ಅಧಿಕಾರಿ ಹಾಗೂ ಪಿ ಐ ರವರ ಸಹಿ ಇರುವ ಚೀಟಿ ಅಂಟಿಸಲಾಯಿತು. ಆತನ

ಕೈಯಲ್ಲಿದ್ದ ಹಳದಿ ಬಣ್ಣದ ಬ್ಯಾಗನ್ನು ಜಪ್ತಿ ಮಾಡಲಾಯಿತು ಮತ್ತು ಮೋಟಾರ ಸೈಕಲನ್ನು ಜಪ್ತಿ ಮಾಡಲಾಯಿತು.

7. ಅಮಾನತುಪಡಿಸಿದ ವಸ್ತುಗಳ ಮೇಲೆ ಹಾಕಿದ ಸೀಲ ನಲ್ಲ ಬೋಲ್ಟನ್ನು ಮಹೇಶ ಇಬ್ರಾಹಿಂ ರವರಿಗೆ ನೀಡಲಾಯಿತು. ಸ್ಥಳದಲ್ಲಿ ಸಂಜೆ 6 ರಿಂದ 8 ಘಂಟೆ ವರೆಗೆ ಪಂಚನಾಮೆ ಬರೆದಿರುತ್ತಾರೆ. ಪಂಚನಾಮೆಯನ್ನು ನಾನೇ ಬರವಣಿಗೆ ಮಾಡಿ ದಸ್ತೂರ ಎಂದು ಸಹಿ ಮಾಡಿದ್ದೇನೆ. ಪಂಚನಾಮೆ ಕಾಲಕ್ಕೆ ಫೋಟೊಗಳನ್ನು ಸಿಬ್ಬಂದಿ ಮುಲ್ಲಾ ರವರು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ– 3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 3 (ಪಿ) ಎಂದು ಗುರುತಿಸಲಾಯಿತು.

8. ಆ ದಿನ ಅಮಾನತುಪಡಿಸಿದ ಮಾದರಿ ಗಾಂಜಾ , ಕಪ್ಪು ಬಣ್ಣದ ಬ್ಯಾಗ ,ಹಳದಿ ಬಣ್ಣದ ಬ್ಯಾಗ ಮತ್ತು 1000 ರೂ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತುಪಡಿಸಿದ ವಸ್ತುಗಳನ್ನು ಮುಮಾ–1 ರಿಂದ 6 ಎಂದು ಗುರುತಿಸಲಾಗಿದೆ . ಜಪ್ತಿ ಮಾಡಿದ ಮೋಟಾರ ಸೈಕಲನ ಫೋಟೊ ನೋಡಿದರೆ ಗುರುತಿಸುತ್ತೇನೆ. ಸದರಿ ಫೋಟೊಗಳನ್ನು ಈಗಾಗಲೇ ನಿಶಾನೆ ಪಿ– 38 ರಿಂದ 41 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲಕ್ಕೆ ತೆಗೆದ ಫೋಟೊಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಶಾನೆ ಪಿ– 4 ರಿಂದ 37 ಎಂದು ಗುರುತಿಸಲಾಗಿದೆ.

9. ಆ ದಿನ ದಾಳಿ ಮಾಡಿದ ಹಿಡಿದ ಆರೋಪಿ 1 ಮತ್ತು 2 ರವರನ್ನು ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ 1 ಮತ್ತು 2 ರವರನ್ನು ಗುರುತಿಸಿದ್ದಾರೆ . ನಂತರ

ಆರೋಪಿತರು, ಮುದ್ದೆಮಾಲುಗಳ ಮತ್ತು ತನಿಖಾಧಿಕಾರಿಗಳು ಠಾಣೆಗೆ ವಾಪಸಾಗಿ ದೂರನ್ನು ನೀಡಿರುತ್ತಾರೆ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ.

10. ದಿಃ 11-9-2020 ರಂದು ಪಿ ಐ ವರು 1 ನೇ ಆರೋಪಿತನನ್ನು ಪೊಲೀಸ ವಶಕ್ಕೆ ಪಡೆದುಕೊಂಡು ಆತನ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಆತನು ತನ್ನ ಹೇಳಿಕೆಯನ್ನು ತನಗೆ ಗಾಂಜಾ ಸಪ್ಲೆ ಮಾಡುತ್ತಿದ್ದ ವ್ಯಕ್ತಿಯನ್ನು ಕರೆದುಕೊಂಡು ಹೋದರೆ ತೋರಿಸುವುದಾಗಿ ತಿಳಿಸಿರುತ್ತಾನೆ ಮತ್ತು ತಾನು ಉಪಯೋಗಿಸಿದ ಮೊಬೈಲನ್ನು ಪಿಂಟೊ ಸರ್ಕಲ ಹತ್ತಿರ ಶೇಖ ಎನ್ನುವವರ ಖುಲ್ಲಾ ಜಾಗದಲ್ಲಿ ಬಚ್ಚಿಟ್ಟಿರುವುದಾಗಿ ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿರುತ್ತಾರೆ. 1 ನೇ ಆರೋಪಿಯು ಪಿ ಐ ರವರು ಪಂಚರನ್ನು ಕರೆದುಕೊಂಡು ಪಿಂಟೋ ಸರ್ಕಲ ಹತ್ತಿರ ಶೇಖ ಎನ್ನುವವರ ಖುಲ್ಲಾ ಜಾಗಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಂಟಿಯ ಕೆಳಗೆ ಇಟ್ಟಿದ್ದ ರೆಡ್ ಮಿ ಮೊಬೈಲನ್ನು ತೆಗೆದು ಹಾಜರುಪಡಿಸಿರುತ್ತಾನೆ. ಪಿ ಎಸ್ ಐ ರಮರ ಸದರಿ ಮೊಬೈಲನ್ನು ಜಪ್ತಿ ಮಾಡಿ ವಶಕ್ಕೆ ಪಡೆದಿದ್ದಾರೆ. ಈ ಬಗ್ಗೆ ಸ್ಥಳದಲ್ಲಿ ಪಂಚನಾಮೆ ಬರೆದಿದ್ದು ನಾನು ಸಹಿ ಮಾಡಿದ್ದೇನೆ. ಸದರಿ ಮೊಬೈಲನ ಮೇಲೆ ಪಂಚರ , ತನಿಖಾಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು. ಪಂಚನಾಮೆಯನ್ನು ಸಂಜೆ 5 ರಿಂದ 5.45 ಘಂಟೆ ವರೆಗೆ ಬರೆಯಲಾಯಿತು. ಸ್ಥಳದಲ್ಲಿ ಕಚ್ಚಾ ನಕ್ಷೆ ತೆಗೆಯಲಾಯಿತು ಮತ್ತು ಫೋಟೊ ತೆಗೆಯಲಾಯಿತು. ಸದರಿ ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಶಾನೆ ಪಿ- 43 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 43 (ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಫೋಟೊಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಶಾನೆ ಪಿ- 44 ಮತ್ತು 45 ಎಂದುಗುರುತಿಸಲಾಗಿದೆ. 1 ನೇ ಆರೋಪಿ ಹಾಜರುಪಡಿಸಿದ ರೆಡ್ ಮಿ ಮೊಬೈಲನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮುಮಾ-7 ಎಂದು ಗುರುತಿಸಲಾಗಿದೆ . ನಂತರ ಆರೋಪಿಯನ್ನು ಕರೆದುಕೊಂಡು ಮುದ್ದೆಮಾಲು ಸಮೇತ ಠಾಣೆಗೆ ವಾಪಸಾಗಿದ್ದೇನೆ.

11. ದಿಃ 15-9-2020 ರಂದು 1 ನೇ ಆರೋಪಿತನ ಹೇಳಿಕೆ ಮೇರೆಗೆ ತನಗೆ ಗಾಂಜಾ ಸಪ್ಲೆ ಮಾಡುತ್ತಿದ್ದ 3 ನೇ ಆರೋಪಿ ಅಬ್ದುಲ ರಜಾಕ ಗದ್ದನಕೇರಿ ಕ್ರಾಸ ಹತ್ತಿರ ಇದ್ದಾನೆ ಎಂದು ತಿಳಿದು ಬಂದಿದ್ದು , ಕೂಡಲೇ ಇಬ್ಬರು ಪಂಚರು ಹಾಗೂ ತೂಕ ಮಾಡುವ ವ್ಯಕ್ತಿಯನ್ನು ಕರೆಸಿದ್ದು , ಸಂಜೆ 7 ಘಂಟೆಗೆ ತನಿಖಾಧಿಕಾರಿ , ಸಿಬ್ಬಂದಿ 1676, 2715 ಹಾಗೂ ಸಿಬ್ಬಂದಿ ಸೇರಿ ಪಂಚರು ಹಾಗೂ ತೂಕ ಮಾಡುವ ವ್ಯಕ್ತಿ ಸೇರಿಕೊಂಡು ಟವೇರಾ ವಾಹನದಲ್ಲಿ ಹೊರಟು 10 ಘಂಟೆಗೆ ಸ್ಥ,ಳ ತಲುಪಿದೆವು. ಅಲ್ಲಿ ನಾವು ಮಹಾರಾಷ್ಟ್ರ ನೊಂದಣಿ ಸಂಃ ಎಂ ಎಚ್ 11-ಎಎ-2345 ಬಿಳಿ ಬಣ್ಣದ ಕಾರನ್ನು ವಾಚ ಮಾಡುತ್ತ ನಿಂತಿದ್ದು ಸದರಿ ವಾಹನ ಬಂದಿದ್ದು, ತನಿಖಾಧಿಕಾರಿ ಸದರಿ ವಾಹನಕ್ಕೆ ನಿಲುಗಡೆ ಸೂಚನೆ ನೀಡಿ ನಿಲ್ಲಿಸಿದರು. ನಮ್ಮ ತನಿಖಾಧಿಕಾರಿ ಸದರಿ ಗಾಡಿ ಚಾಲಕನಿಗೆ ನೀನು ಗಾಂಜಾ ಸಪ್ಲೆ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದೆ ಎಂದು ಹೇಳಿ ಆತನ ಹೆಸರು ವಿಚಾರಿಸಲಾಗಿ ಆತ ತನ್ನ ಹೆಸರು ಅಬ್ದುಲ ರಜಾಕ ಎಂದು ತಿಳಿಸಿದನು. ಸದರಿ ವ್ಯಕ್ತಿ ತನ್ನ ಕಾರನ ಡಿಕ್ಕಿ ತೆರೆದು ನೋಡಲಾಗಿ ಅದರಲ್ಲಿ ಎಲೆ , ಬೀಜ ಇರುವ ಗಾಂಜಾ ಇತ್ತು. ರಮೇಶ ಅಮ್ಮಿನಬಾವಿ ಎಂಬ ವ್ಯಕ್ತಿಯ ಸಹಾಯದಿಂದ ಸದರಿ ಗಾಂಜಾ ತೂಕ ಮಾಡಲಾಗಿ ಅದು 1 ಕೆ ಜಿ 10 ಗ್ರಾಂತ ತೂಕ ಇತ್ತು ಮತ್ತು ಸದರಿ ವ್ಯಕ್ತಿ ಗಾಂಜಾ ಮಾರಾಟ ಬಂದ ಹಣ 1500 ಹಣ ಹಾಜರುಪಡಿಸಿದನು. ಅಲ್ಲದೇ ಕೃತ್ಯಕ್ಕೆ ಉಪಯೋಗಿಸಿದ ಒಂದು ಸ್ಯಾಮಸಂಗ ಮೊಬೈಲನ್ನು ಹಾಜರುಪಡಿಸಿರುತ್ತಾನೆ. ಸದರಿ ಗಾಂಜಾ ಪಾಕೇಟನಿಂದ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದು ಅದರ ಮೇಲೆ ಟಿ ವಿ ಎಸ್ 8.8 ಎಂಬ ಬೋಲ್ಟನಿಂದ ಸೀಲು ಮಾಡಲಾಯಿತು. ಮಾದರಿ ಗಾಂಜಾವನ್ನು ಎಸ್-1 ಎಂದು ಉಳಿದ ಗಾಂಜಾವನ್ನು ಆರ್-1 ಎಂದು ಗುರುತಿಸಲಾಯಿತು. ಸದರಿ ವಸ್ತುಗಳ ಮೇಲೆ ಪಂಚರ ಸಹಿ ಇರುವ ಚೀಟಿ ಅಂಟಿಸಲಾಯಿತು. ಕಾರನ್ನು ಸಹ ಅಮಾನತುಪಡಿಸಿಕೊಳ್ಳಲಾಯಿತು. ಸ್ಥಳದಲ್ಲಿ ಪಂಚನಾಮೆ ಬರೆದು ದಸ್ತೂರ ಎಂದು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಮಧ್ಯಾಹ್ನ 1 ರಿಂದ 3 ಘಂಟೆ ವರೆಗೆ ಬರೆಯಲಾಯಿತು. ಪಂಚನಾಮೆಯನ್ನು ನಾನೇ ಬರೆದಿದ್ದೇನೆ. ಸದರಿ ಪಂಚನಾಮೆಯನ್ನು ನಿಶಾನೆ ಪಿ-59 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 5 9

(ಡಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಸಿಬ್ಬಂದಿ ಬಿ ಎಂ ಹೆದ್ದೇರಿ ರವರು ಫೋಟೊ ತೆಗೆದಿರುತ್ತಾರೆ . ಸದರಿ ಫೋಟೊಗಳನ್ನು ಗುರುತಿಸುತ್ತೇನೆ. ಸದರಿ ಫೋಟೊಗಳನ್ನು ನಿಶಾನೆ ಪಿ- 60 ರಿಂದ 73 ಎಂದು ಗುರುತಿಸಲಾಗಿದೆ. ಅಮಾನತುಪಡಿಸಿದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಶಾನೆ ಪಿ- 60 ಫೋಟೊ ದಲ್ಲಿ ಸದರಿ ಕಾರು ಕಂಡುಬರುತ್ತದೆ ಎಂದು ನುಡಿಯುತ್ತಾರೆ. ಅಮಾನತುಪಡಿಸಿದ ಮಾದರಿ ಗಾಂಜಾ ನೋಡಿದರೆ ಗುರುತಿಸುತ್ತೇನೆ. ಸೀಲು ಮಾಡಲಾದ ಪಾಕೇಟನ್ನು ತೆರೆಯಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು ಅದನ್ನು ಮುಮಾ- 8 ಎಂದು ಗುರುತಿಸಲಾಯಿತು. 3 ನೇ ಆರೋಪಿಯಿಂದ ಅಮಾನತುಪಡಿಸಿದ ಸ್ಯಾಮಸಂಗ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಮುಮಾ-9 ಎಂದು ಗುರುತಿಸಲಾಯಿತು. 3 ನೇ ಆರೋಪಿಯಿಂದ ಅಮಾನತುಪಡಿಸಲಾದ ರೂ.1500/- ಗುರುತಿಸುತ್ತೇನೆ. ಅದನ್ನು ಮುಮಾ-10 ಎಂದು ಗುರುತಿಸಲಾಯಿತು.

12. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಮುದ್ದೆಮಾಲು ಸಮೇತ ಠಾಣೆಗೆ ವಾಪಸಾಗಿರುತ್ತೇವೆ. ಈ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ. 3 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 3 ನೇ ಆರೋಪಿ ಅಬ್ದುಲ ರಜಾಕರವರನ್ನು ಗುರುತಿಸಿರುತ್ತಾರೆ.

13. 3 ನೇ ಆರೋಪಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಚಂದ್ರಕಾಂತ ಅಲಿಯಾಸ ಪಪ್ಪು ಚವ್ಹಾಣ ಈತನು ಪರಪ್ಪನ ಅಗ್ರಹಾರದಲ್ಲಿ ಬೇರೆ ಪ್ರಕರಣದಲ್ಲಿ ಜೈಲುವಾಸಿಯಾಗಿದ್ದು ಆತನನ್ನು ಪೊಲೀಸ ವಶಕ್ಕೆ ಪಡೆದುಕೊಂಡು ಆತನನ್ನು ನನಗೆ ತೋರಿಸಿದರು. ಆತನ ವಿಚಾರಣೆ ಮಾಡಿದಾಗ ತಾನು 3 ನೇ ಆರೋಪಿಗೆ ಗಾಂಜಾ ಸಪ್ಲೆ ಮಾಡುತ್ತಿರುವುದಾಗಿ ಹೇಳಿದನು ಮತ್ತು ಸದರಿ ಗಾಂಜಾವನ್ನು ಗುಲಬರ್ಗಾ ಮತ್ತು ಬೆಂಗಳೂರು ಹೈವೆಯಲ್ಲಿ ಕೊಡುತ್ತಿರುವುದಾಗಿ ಹೇಳಿದನು ಮತ್ತು 3 ನೇ ಆರೋಪಿ ಗಾಂಜಾವನ್ನು ಖರೀದಿ ಮಾಡಿ ಹಣವನ್ನು 4 ನೇ ಆರೋಪಿಯ ಎಕ್ಸಿಸ್ ಬ್ಯಾಂಕ ಖಾತೆಗೆ ಫೋನ ಮೂಲಕ ಜಮಾ

ಮಾಡುತ್ತಿರುವುದಾಗಿ ಹೇಳಿದನು. ಆ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ. 4 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 4 ನೇ ಆರೋಪಿ ಪರ ವಕೀಲರು ಆರೋಪಿಯ ಹಾಜರಾತಿಗಾಗಿ ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಹೇಳಿದ್ದಾರೆ .

**ಪಾಟೀಸವಾಲು 3 ಮತ್ತು 4 ನೇ ಆರೋಪಿಗಳ ಪರವಾಗಿ ವಿ ಜಿ ಎಚ್ ವಕೀಲರಿಂದಃ**

14. ನಾನು ಠಾಣೆಗೆ ಹಾಜರಾದ ಬಗ್ಗೆ ಎಸ್ ಎಚ್ ಡಿಯಲ್ಲಿ ನಮೂದು ಮಾಡುವುದಿಲ್ಲ. ಅದನ್ನು ಎಸ್ ಎಚ್ ಓ ಬರೆಯುತ್ತಾರೆ. ಎಸ್ ಎಚ್ ಓರವರು ಯಾವುದಾದರೂ ಅಪರಾಧದ ಬಗ್ಗೆ ಮಾಹಿತಿ ಬಂದರೆ ಅದನ್ನು ಎಸ್ ಎಚ್ ಡಿಯಲ್ಲಿ ಬರೆಯುತ್ತಾರೆ ಮತ್ತು ದಾಳಿಗೆ ಹೋಗಿ ವಾಪಸಾದ ನಂತರ ಕ್ಲೋಸ್ ಮಾಡುತ್ತಾರೆ. ದಾಳಿಗಾಗಿ ಎಷ್ಟು ಸಿಬ್ಬಂದಿ ಹೋಗಿದ್ದಾರೆ ಎಂದು ಎಸ್ ಎಚ್ ಡಿಯಲ್ಲಿ ಬರೆಯುತ್ತಾರೆ. ಚಾಸಾ-1 ರವರು ನನ್ನ ಮೇಲಾಧಿಕಾರಿ ಇರುತ್ತಾರೆ.

15. ದಿಃ 15-9-2020 ರಂದು 1 ನೇ ಆರೋಪಿತನ ಹೇಳಿಕೆ ಮೇರೆಗೆ ತನಗೆ ಗಾಂಜಾ ಸಪ್ಲೆ ಮಾಡುತ್ತಿದ್ದ 3 ನೇ ಆರೋಪಿ ಅಬ್ದುಲ ರಜಾಕ ಗದ್ದನಕೇರಿ ಕ್ರಾಸ ಹತ್ತಿರ ಇದ್ದಾನೆ ಎಂದು ತಿಳಿದು ಬಂದಿದ್ದು , ಕೂಡಲೇ ಇಬ್ಬರು ಪಂಚರು ಹಾಗೂ ತೂಕ ಮಾಡುವ ವ್ಯಕ್ತಿಯನ್ನು ಕರೆಸಿದ್ದು , ಸಂಜೆ 7 ಘಂಟೆಗೆ ತನಿಖಾಧಿಕಾರಿ , ಸಿಬ್ಬಂದಿ 1676, 2715 ಹಾಗೂ ಸಿಬ್ಬಂದಿ ಸೇರಿ ಪಂಚರು ಹಾಗೂ ತೂಕ ಮಾಡುವ ವ್ಯಕ್ತಿ ಸೇರಿಕೊಂಡು ಟವೇರಾ ವಾಹನದಲ್ಲಿ ಹೊರಟು 10 ಘಂಟೆಗೆ ಸ್ಥ,ಳ ತಲುಪಿ ಅಲ್ಲಿ ನಾವು ಮಹಾರಾಷ್ಟ್ರ ನೊಂದಣಿ ಸಂಃ ಎಂ ಎಚ್ 11-ಎಎ-2345 ಬಿಳಿ ಬಣ್ಣದ ಕಾರನ್ನು ವಾಚ ಮಾಡುತ್ತ ನಿಂತಿದ್ದು ಸದರಿ ವಾಹನ ಬಂದಿದ್ದು, ತನಿಖಾಧಿಕಾರಿ ಸದರಿ ವಾಹನಕ್ಕೆ ನಿಲುಗಡೆ ಸೂಚನೆ ನೀಡಿ ನಿಲ್ಲಿಸಿದ್ದು ನಮ್ಮ ತನಿಖಾಧಿಕಾರಿ ಸದರಿ ಗಾಡಿ ಚಾಲಕನಿಗೆ ನೀನು ಗಾಂಜಾ ಸಪ್ಲೆ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದೆ

ಎಂದು ಹೇಳಿ ಆತನ ಹೆಸರು ವಿಚಾರಿಸಲಾಗಿ ಆತ ತನ್ನ ಹೆಸರು ಅಬ್ದುಲ ರಜಾಕ ಎಂದು ತಿಳಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ವ್ಯಕ್ತಿ ತನ್ನ ಕಾರನ ಡಿಕ್ಕಿ ತೆರೆದು ನೋಡಲಾಗಿ ಅದರಲ್ಲಿ ಎಲೆ , ಬೀಜ ಇರುವ ಗಾಂಜಾ ಇತ್ತು ಹಾಗೂ ರಮೇಶ ಅಮ್ಮಿನಬಾವಿ ಎಂಬ ವ್ಯಕ್ತಿಯ ಸಹಾಯದಿಂದ ಸದರಿ ಗಾಂಜಾ ತೂಕ ಮಾಡಲಾಗಿ ಅದು 1 ಕೆ ಜಿ 10 ಗ್ರಾಂತ ತೂಕ ಇತ್ತು ಮತ್ತು ಸದರಿ ವ್ಯಕ್ತಿ ಗಾಂಜಾ ಮಾರಾಟ ಬಂದ ಹಣ 1500 ಹಣ ಹಾಜರುಪಡಿಸಿದ್ದು ಅಲ್ಲದೇ ಕೃತ್ಯಕ್ಕೆ ಉಪಯೋಗಿಸಿದ ಒಂದು ಸ್ಯಾಮಸಂಗ ಮೊಬೈಲನ್ನು ಹಾಜರುಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಗಾಂಜಾ ಪಾಕೇಟನಿಂದ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದು ಅದರ ಮೇಲೆ ಟಿ ವಿ ಎಸ್ 8.8 ಎಂಬ ಬೋಲ್ಟನಿಂದ ಸೀಲು ಮಾಡಿ ಮಾದರಿ ಗಾಂಜಾವನ್ನು ಎಸ್-1 ಎಂದು ಉಳಿದ ಗಾಂಜಾವನ್ನು ಆರ್-1 ಎಂದು ಗುರುತಿಸಲಾಯಿತು ಹಾಗೂ ಸದರಿ ವಸ್ತುಗಳ ಮೇಲೆ ಪಂಚರ ಸಹಿ ಇರುವ ಚೀಟಿ ಅಂಟಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕಾರನ್ನು ಸಹ ಅಮಾನತುಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಬರೆದು ದಸ್ತೂರ ಎಂದು ಸಹಿ ಮಾಡಿದ್ದು ಪಂಚನಾಮೆಯನ್ನು ಮಧ್ಯಾಹ್ನ 1 ರಿಂದ 3 ಘಂಟೆ ವರೆಗೆ ಬರೆಯಲಾಯಿತು ಹಾಗೂ ಪಂಚನಾಮೆ ಕಾಲಕ್ಕೆ ಸಿಬ್ಬಂದಿ ಬಿ ಎಂ ಹೆದ್ದೇರಿ ರವರು ಫೋಟೊ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

16. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಮುದ್ದೆಮಾಲು ಸಮೇತ ಠಾಣೆಗೆ ವಾಪಸಾಗಿ ಈ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

17. 3 ನೇ ಆರೋಪಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಚಂದ್ರಕಾಂತ ಅಲಿಯಾಸ ಪಪ್ಪ ಚವ್ಹಾಣ ಈತನು ಪರಪ್ಪನ ಅಗ್ರಹಾರದಲ್ಲಿ ಬೇರೆ ಪ್ರಕರಣದಲ್ಲಿ ಜೈಲುವಾಸಿಯಾಗಿದ್ದು ಆತನನ್ನು ಪೊಲೀಸ ವಶಕ್ಕೆ ಪಡೆದುಕೊಂಡು ಆತನನ್ನು ನನಗೆ ತೋರಿಸಿದ್ದು ಆತನ ವಿಚಾರಣೆ ಮಾಡಿದಾಗ ತಾನು 3 ನೇ ಆರೋಪಿಗೆ ಗಾಂಜಾ ಸಪ್ಲೆ ಮಾಡುತ್ತಿರುವುದಾಗಿ ಹೇಳಿದನು ಮತ್ತು ಸದರಿ ಗಾಂಜಾವನ್ನು ಗುಲಬರ್ಗಾ

ಮತ್ತು ಬೆಂಗಳೂರು ಹೈವೆಯಲ್ಲಿ ಕೊಡುತ್ತಿರುವುದಾಗಿ ಹೇಳಿದನು ಮತ್ತು 3 ನೇ ಆರೋಪಿ ಗಾಂಜಾವನ್ನು ಖರೀದಿ ಮಾಡಿ ಹಣವನ್ನು 4 ನೇ ಆರೋಪಿಯ ಎಕ್ಸಿಸ್ ಬ್ಯಾಂಕ ಖಾತೆಗೆ ಪೋನ ಮೂಲಕ ಜಮಾ ಮಾಡುತ್ತಿರುವುದಾಗಿ ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

18. 1 ನೇ ಆರೋಪಿಯು ಪಿಂಟೊ ಸರ್ಕಲ ಹತ್ತಿರ ಶೇಖ ರವರ ಜಮೀನಿನಲ್ಲಿ ಇಟ್ಟಿದ್ದ ಮೊಬೈಲನ್ನು ಹಾಜರುಪಡಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ-1 ಮತ್ತು 2 ರವರಿಗೂ ಮತ್ತು 3 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. 3 ನೇ ಆರೋಪಿ ಮಹಾರಾಷ್ಟ್ರದವನು ಅಂದರೆ ಸರಿ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಪಂಚನಾಮೆಯನ್ನು ನಾನೇ ಬರೆದಿದ್ದೇನೆ ಎಂದು ಹೇಳಿಲ್ಲ. ನಮ್ಮ ತನಿಖಾಧಿಕಾರಿಯು ಆರೋಪಿ ಶೋದನೆಯನ್ನು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೋ ಅಥವಾ ನ್ಯಾಯಾಧೀಶರ ಮುಂದೆ ಮಾಡಬೇಕೋ ಎಂದು ನೋಟೀಸು ಕೊಟ್ಟಿಲ್ಲ ಅಂದರೆ ಸರಿ. 4 ನೇ ಆರೋಪಿಯ ಕಾರ ಡಿಕ್ಕಿಯಿಂದ 1 ಕೆ ಜಿ 10 ಗ್ರಾಂ ಗಾಂಜಾ ಸಿಕ್ಕಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮುದ್ದೆಮಾಲು - 8, 9 ಮತ್ತು 10 ರ ಪಾಕೇಟನ ಮೇಲೆ ಅಂಟಿಸಿದ ಚೀಟಿ ಮೇಲೆ ನನ್ನ ಸಹಿ ಇಲ್ಲ. ನಿಶಾನೆ ಪಿ-60 ರಿಂದ 73 ರ ಫೋಟೊಗಳಲ್ಲಿ ನಾನು ಪಂಚನಾಮೆ ಬರೆಯುವುದು ಕಂಡುಬರುತ್ತಿಲ್ಲ ಅಂದರೆ ಸರಿಯಲ್ಲ.

19. 3 ನೇ ಆರೋಪಿ ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡದೆ ಇದ್ದರೂ ಸಹ 4 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಅಂದರೆ ಸರಿಯಲ್ಲ. ಆರೋಪಿ 3 ಮತ್ತು 4 ರವರ ನಡುವೆ ಯಾವುದೇ ಸಂಬಂಧ ಇಲ್ಲ ಮತ್ತು ಅವರ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರ ಸುಳ್ಳಿನಿಂದ ಕೂಡಿವೆ ಅಂದರೆ ಸರಿಯಲ್ಲ. ನಾನು ಯಾವುದೇ ದಾಳಿಯಲ್ಲಿ ಭಾಗಿಯಾಗಿಲ್ಲ ಮತ್ತು ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದು ಸಹಿ ಮಾಡಲಾಗಿದೆ ಅಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ ಆರೋಪಿ 3

ಮತ್ತು 4 ರವರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಠಾಣೆಯಲ್ಲಿರುವ unclaimed property ಯನ್ನು ಈ ಪ್ರಕರಣಕ್ಕೆ ಸೇರಿಸಲಾಗಿದೆ ಅಂದರೆ ಸರಿಯಲ್ಲ. ಮುಮಾ–8 ರಿಂದ 10 3 ನೇ ಆರೋಪಿಗೆ ಸಂಬಂಧಿಸಿದ್ದಲ್ಲ ಅಂದರೆ ಸರಿಯಲ್ಲ.

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಟಿ ಅರ್ ಪಿ ವಕೀಲರಿಂದಃ**

1 ಮತ್ತು 2 ನೇ ಆರೋಪಿತರ ಪರವಾಗಿ ಟಿ ಆರ್ ಪಿ ರವರ ವಕೀಲರು ಗೈರು ಹಾಜರಾಗಿದ್ದು ಶ್ರೀ ಎ ಬಿ ಎಚ್ ರವರು ನ್ಯಾಯಾಲಯದ ಮುಂದೆ ಹಾಜರಾಚಗಿ ಶ್ರೀ ಟಿ ಆರ್ ಬಿ ರವರ ಕುಟುಂಬದ ವ್ಯಕ್ತಿ ಮರಣ ಹೊಂದಿರುವುದರಿಂದ ನ್ಯಾಯಾಲಯದ ಮುಂದೆ ಹಾಜರಾಗಿ ಪಾಟಿ ಸವಾಲು ಮಾಡಲು ಸಾಧ್ಯವಾಗದ ಕಾರಣ ಪಾಟಿ ಸವಾಲಿಗೆ ಕಾಲಾವಕಾಶ ನೀಡಬೇಕೆಂದು ಕೇಳಿರುತ್ತಾರೆ. ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಪಾಟಿ ಸವಾಲಿಗೆ ಕಾಲಾವಕಾಶ ನೀಡಲಾಗಿದೆ.

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.